**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 166/2021 |
| ಸಿ.ಡಬ್ಲ್ಯೂ | 8 |
| ಪಿ.ಡಬ್ಲ್ಯೂ | 5 |

| | | |
|---|---|---|
| ಹೆಸರು | :- | ರುಬಿಯಾನ ಬಡೇಖಾನ |
| ತಂದೆ/ಗಂಡನ ಹೆಸರು | :- | ಬಾಳಾಸಾಬ |
| ವಯಸ್ಸು | :- | 35 ವರ್ಷ |
| ಉದ್ಯೋಗ | :- | ಡಬ್ಲ್ಯೂ.ಪಿ.ಸಿ ನಂ.1451 ಕೆರೂರ ಠಾಣೆ |
| ವಾಸಸ್ಥಳ | :- | ಕೆರೂರ |

ಸಾಕ್ಷಿಯನ್ನು ದಿಃ27.06.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ಏಪ್ರಿಲ್ - 2015 ರಿಂದ 2021 ರವರೆಗೆ ನಾನು ಲೋಕಾಪೂರ ಠಾಣೆಯಲ್ಲಿ ಮಹಿಳಾ ಪೊಲೀಸ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ದಿಃ10.12.2015 ರಂದು ಮುಂಜಾನೆ 11-00 ಗಂಟೆಗೆ ನಾನು ಮತ್ತು ಚಾಸಾ-1 ರವರು ಪೊಲೀಸ ಠಾಣೆಯಲ್ಲಿ ಇದ್ದಾಗ ಒಂದು ಮಾಹಿತಿ ಬಂದಿದ್ದು, ಅದರಲ್ಲಿ ಚಿಕ್ಕೂರ ತಾಂಡಾ ನಂ.2 ಸುಶೀಲಾ ಲಮಾಣಿ ಎಂಬುವವರು ಅಕ್ರಮ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದ್ದು, ಸದರಿ ವಿಷಯವನ್ನು ನನಗೆ ಮತ್ತು ಚಾಸಾ-4 ರಿಂದ ಚಾಸಾ-7 ರವರಿಗೆ ತಿಳಿಸಿ, ಚಾಸಾ-5 ರವರಿಗೆ ಇಬ್ಬರು ಪಂಚರನ್ನು ಬರಮಾಡಿಕೊಳ್ಳಲು ಸೂಚಿಸಿದ್ದು, ಅದರಂತೆ ಅವರು ಚಾಸಾ-2 ಮತ್ತು ಚಾಸಾ-3 ರವರನ್ನು ಪಂಚರಾಗಿ ಬರಮಾಡಿಕೊಂಡು, ಪಂಚರಾಗಿ ಸದರಿ ವ್ಯಕ್ತಿಗಳು ಬರಲು ಒಪ್ಪಿಕೊಂಡ ಮೇರೆಗೆ ಅವರನ್ನು ಕರೆದುಕೊಂಡು ಠಾಣೆಯಿಂದ ಬೆಳಿಗ್ಗೆ 11-30 ಗಂಟೆಗೆ ಇಲಾಖಾ ಜೀಪನಲ್ಲಿ ಹೊರಟು ಬಾತ್ಮಿ ಬಂದ ಸ್ಥಳಕ್ಕೆ 12-15 ಗಂಟೆಗೆ ತಲುಪಿದೆವು. ಬಾತ್ಮಿ ಸ್ಥಳದಲ್ಲಿ ನೋಡಲಾಗಿ ಒಂದು ಮನೆಯ ಮುಂದೆ ಒಬ್ಬ ಮಹಿಳೆ ಕುಳಿತಿದ್ದು, ಆಕೆಯು ಮುಂದೆ ಒಂದು ಕೈಚೀಲ ಇದ್ದು, ಸದರಿ ಕೈ ಚೀಲದಿಂದ ಪಾಕೆಟಗಳನ್ನು ತೆಗೆದು ಆಕೆ ಸಾರ್ವಜನಿಕರಿಗೆ ಕೊಡುತ್ತಿದ್ದಳು. ಕೂಡಲೇ ರೇಡ ಮಾಡಲಾಗಿ, ಸದರಿ ಆರೋಪಿತಳನ್ನು ನಾನು ಹಿಡಿದು ಆಕೆಯ ಹೆಸರು ಕೇಳಲಾಗಿ ಆಕೆ ತನ್ನ ಹೆಸರು ಸುಶೀಲಮ್ಮಾ ಮಾರುತಿ ಲಮಾಣಿ ಎಂದು ತಿಳಿಸಿದಳು. ಆಕೆಯ ಹತ್ತಿರ ಇರುವ ಕೈ ಚೀಲನಲ್ಲಿ ಇರುವ ಪಾಕೆಟಗಳಿಂದ ಗಡಸು ವಾಸನೆ ಬರುತ್ತಿದ್ದು, ಪರಿಶೀಲಿಸಲಾಗಿ, ಅದರಲ್ಲಿ ಒಟ್ಟು 100 ಎಮ್.ಎಲ್ ಅಳತೆಯ 40 ಪಾಕೆಟಗಳು ಇದ್ದವು. ಅವುಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಲಾಗಿ ಅದರಲ್ಲಿ 2 ಪಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು, ಖಾಕಿ ಕವರ ಹಾಕಿ, ದಾರದಿಂದ ಕಟ್ಟಿ, ಕೈ ಚಿಲವನ್ನು ಸಹ ವಶಪಡಿಸಿಕೊಂಡು ಇಲಾಖಾ

ಸೀಲ್ ಹಾಕಿ ಚಾಸಾ-1 ಮತ್ತು ಚಾಸಾ-2 ಹಾಗೂ ಚಾಸಾ-3 ರವರ ಸಹಿ ಉಳ್ಳ ಚೀಟಿ ಅಂಟಿಸಲಾಯಿತು. ಆಕೆಯನ್ನು ನಾನು ಅಂಗಜಪ್ತಿ ಮಾಡಿ ನೋಡಲಾಗಿ ಆಕೆಯ ಬಳಿ ರೂ.60/- ರೂಗಳು ದೊರಕಿದವು. ಸದರಿ ಹಣವನ್ನು ಸಹ ಜಪ್ತು ಮಾಡಿಕೊಂಡು ಪಂಚನಾಮೆಯನ್ನು ಸ್ಥಳದಲ್ಲಿ 12-15 ರಿಂದ 1-15 ರವರೆಗೆ ಬರೆದು, ಚಾಸಾ-1 ರಿಂದ ಚಾಸಾ-3 ರವರ ಸಹಿಯನ್ನು ಸ್ಥಳದಲ್ಲಿ ಪಡೆಯಲಾಯಿತು. ನಂತರ ಚಾಸಾ-1 ರವರಿಗೆ ಆರೋಪಿತಳು, ವಶಪಡಿಸಿಕೊಂಡ ಮುದ್ದೆ ಮಾಲು ಮತ್ತು ಪಂಚನಾಮೆಯನ್ನು ಠಾಣೆಗೆ ತೆಗೆದುಕೊಂಡು ಬರಲು ಅವಶ್ಯವಿದ್ದ ಸಹಾಯ ಮಾಡಿರುತ್ತೇನೆ. ಮುಮಾ-1 ಮತ್ತು ಮುಮಾ-2 ತೋರಿಸುತ್ತಿದ್ದು ಅವುಗಳನ್ನು ಅವರು ಗುರುತಿಸುತ್ತಾರೆ. ಮುಮಾ-3 ನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತಳನ್ನು ನೋಡಿದರೆ ಗುರುತಿಸುತ್ತಾರೆ.

**<u>ಪಾಟೀ ಸವಾಲು : ಶ್ರೀ.ಎ.ಎಸ್.ಎಸ್ ವಕೀಲರಿಂದ ಶ್ರೀ.ಬಿ.ಆರ್.ಡಿ ವಕೀಲರ ಪರ ಆರೋಪಿ ಪರ</u>**

1. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಚಾಸಾ-1 ರವರಿಗೆ ಯಾವುದೇ ಮಾಹಿತಿ ಬಂದಿಲ್ಲ, ಚಾಸಾ-5 ರವರಿಗೆ ಪಂಚರನ್ನು ಬರಮಾಡಿಕೊಳ್ಳಲು ತಿಳಿಸಿಲ್ಲ, ಪಂಚರಿಗೆ ಚಾಸಾ-1 ರವರು ವಿಷಯ ತಿಳಿಸಿಲ್ಲ, ಘಟನಾ ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಆರೋಪಿತಳು ಯಾವುದೇ ಅಕ್ರಮ ಸಾರಾಯಿ ಮಾರಾಟ ಮಾಡುತ್ತಿರಲಿಲ್ಲ, ನೀವು ವಶಪಡಿಸಿಕೊಂಡ ಮುದ್ದೆ ಮಾಲಿಗೆ, ಹಣಕ್ಕೆ ಮತ್ತು ಆರೋಪಿತಳಿಗೂ ಯಾವುದೇ ಸಂಬಂಧ ಇಲ್ಲ, ನೀವು ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ, ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಮುದ್ದೆ ಮಾಲಿನಿಂದ ರಾಸಾಯನಿಕ ಪರೀಕ್ಷೆಗಾಗಿ ಯಾವುದೇ ಮುದ್ದೆ ಮಾಲು ತೆಗೆದಿಲ್ಲ ಎಂದರೆ ಸರಿಯಲ್ಲ. ಆರೋಪಿತಳಿಗೂ ಮತ್ತು ಸಲ್ಲಿಸಿದ ಪ್ರಕರಣಕ್ಕೂ ಸಂಬಂಧ ಇಲ್ಲದಿದ್ದರೂ ಸಹ ಚಾಸಾ-1 ರವರು ನಿಮ್ಮ ಮೇಲಾಧಿಕಾರಿ ಆದ ಕಾರಣ ಅಂಕಿ-ಸಂಖ್ಯೆಗಳಿಗೋಸ್ಕರ ಅವರು ಸಲ್ಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 166/2021 |
| ಸಿ.ಡಬ್ಲ್ಯೂ | 10 |
| ಪಿ.ಡಬ್ಲ್ಯೂ | 6 |

| | | |
|---|---|---|
| ಹೆಸರು | :- | ಸಲೀಂ ಖಾಟಿಕ |
| ತಂದೆ/ಗಂಡನ ಹೆಸರು | :- | ಬಾಪುಹುಸೇನ |
| ವಯಸ್ಸು | :- | 68 ವರ್ಷ |
| ಉದ್ಯೋಗ | :- | ನಿವೃತ್ತ ಎ.ಎಸ್.ಐ |
| ವಾಸಸ್ಥಳ | :- | ವಿಜಯಪುರ |

**ಸಾಕ್ಷಿಯನ್ನು ದಿಃ27.06.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. 2014 ರಿಂದ 2017 ರವರೆಗೆ ನಾನು ಲೋಕಾಪೂರ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ10.12.2015 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ-1 ರವರು ಮುದ್ದೆ ಮಾಲು, ಪಂಚನಾಮೆ ಮತ್ತು ಆರೋಪಿತಳೊಂದಿಗೆ ಠಾಣೆಗೆ ಬಂದು ನೀಡಿದ ದೂರನ್ನು ಸ್ವೀಕರಿಸಿ, ಅದನ್ನು ನಮ್ಮ ಠಾಣಾ ಗುನ್ನಾ ಸಂಖ್ಯೆ 195/2015 ಎಂದು ದಾಖಲಿಸಿಕೊಂಡು ಪ್ರ.ವ.ವ ವರದಿಯ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಮತ್ತೊಂದು ಪ್ರತಿ ಮೇಲಾಧಿಕಾರಿಯವರಿಗೆ ಕಳುಹಿಸಿ ಕೊಟ್ಟಿರುತ್ತೇನೆ. ಆರೋಪಿತಳನ್ನು ದಸ್ತಗೀರಿ ಮಾಡಿ, ದಸ್ತಗೀರಿ ನಿಯಮ ಪಾಲಿಸಿ ಸೂಕ್ತ ಬೆಂಗಾವಿಲಿನೊಂದಿಗೆ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಚಾಸಾ-4 ರಿಂದ ಚಾಸಾ-9 ರವರ ಹೇಳಿಕೆಗಳನ್ನು ಅದೇ ದಿನ ಪಡೆದಿರುತ್ತೇನೆ. ಅದೇ ದಿನ ಜಪ್ತುಪಡಿಸಿಕೊಂಡದಕ್ಕೆ ಸ್ವತ್ತಿನ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ06.04.2016 ರಂದು ಜಪ್ತಾದ ಮುದ್ದೆ ಮಾಲಿನಿಂದ ರಾಸಾಯನಿಕ ಪರೀಕ್ಷೆಗಾಗಿ ಅಬಕಾರಿ ಸ್ವತ್ತನ್ನು ಎಫ್.ಎಸ್.ಎಲ್ ಬೆಳಗಾವಿಗೆ ಕಳುಹಿಸಿ, ಸ್ವೀಕೃತಿ ಪತ್ರವನ್ನು ಅದೇ ದಿನ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ08.09.2016 ರಂದು ಎಫ್.ಎಸ್.ಎಲ್ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಪ್ರಾಧಿಕೃತ ಅಧಿಕಾರಿ, ಬಾಗಲಕೋಟೆ ಇವರಿಗೆ ಪತ್ರ ಬರೆದು ದಿಃ08.09.2016 ರಂದು ಅನುಮತಿ ಪಡೆದು ದಿಃ.30.10.2016 ರಂದು ಅಬಕಾರಿ ನಿರೀಕ್ಷಕರು, ಮುಧೋಳ ಇವರಿಗೆ ಇವರಿಗೆ ಹಸ್ತಾಂತರಿಸಿ ವರದಿ ಪಡೆದಿರುತ್ತೇನೆ. ದಿಃ03.10.2016 ರಂದು ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಿದ್ದ ಕಾರಣ ದೋಷರೋಪಣಾ ಪಟ್ಟಿ ತಯಾರಿಸಿ ಸಲ್ಲಿಸಿರುತ್ತೇನೆ.

2. ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸುತ್ತಿದ್ದು ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ ತೋರಿಸುತ್ತಿದ್ದು, ಅದರ ಮೇಲಿನ ತಮ್ಮ ಸಹಿ ಗುರುತಿಸಿದ್ದರಿಂದ ಸದರಿ ದಾಖಲಾತಿಯನ್ನು ನಿಪಿ-3 ಮತ್ತು ಸಾಕ್ಷಿಯ ನಿಪಿ-3(ಎ) ಎಂದು ಗುರುತಿಸಲಾಯಿತು. ಸ್ವತ್ತಿನ ಪಟ್ಟಿ ಸಂಖ್ಯೆ 70/2015 ನ್ನು ತೋರಿಸುತ್ತಿದ್ದು ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ, ಸದರಿ ದಾಖಲಾತಿಯನ್ನು ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ದಿಃ06.04.2016 ರಂದು ಎಫ್.ಎಸ್.ಎಲ್ ಬೆಳಗಾವಿಯಿಂದ ಸ್ವೀಕರಿಸಿದ ಸ್ವೀಕೃತಿ ಪ್ರತಿ ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಮತ್ತು ದಿಃ08.09.2016 ರಂದು ಸ್ವೀಕರಿಸಿದ ರಾಸಾಯನಿಕ ಪರೀಕ್ಷಾ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು ನಿಪಿ-6 ಎಂದು ಸಾಕ್ಷಿಯ ಸಹಿ ನಿಪಿ-6(ಎ) ಎಂದು ಗುರುತಿಸಲಾಯಿತು. ದಿಃ08.09.2016 ಪ್ರಾಧಿಕೃತ ಅಧಿಕಾರಿಗಳಿಂದ ಸ್ವೀಕರಿಸಿದ ಜ್ಞಾಪನಾ ಪತ್ರ ಹಾಗೂ ದಿಃ03.10.2016 ಅಬಕಾರಿ ನಿರೀಕ್ಷಕರು ಇವರಿಗೆ ಹಸ್ತಾಂತರಿಸಿದ ಬಗ್ಗೆ ದಾಖಲಾತಿಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ನಿಪಿ-7 ಮತ್ತು ನಿಪಿ-8 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-7(ಎ), ನಿಪಿ-8(ಎ) ಎಂದು ಗುರುತಿಸಲಾಯಿತು. ಆರೋಪಿತಳನ್ನು ಮತ್ತು ಮುಮಾ-1 ರಿಂದ ಮುಮಾ-3 ನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**ಪಾಟೀ ಸವಾಲು : ಶ್ರೀ.ಬಿ.ಪಿ.ಡಿ ವಕೀಲರಿಂದ ಆರೋಪಿ ಪರವಾಗಿ**

1. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ದೂರು ಸ್ವೀಕರಿಸಿಲ್ಲ, ಯಾವುದೇ ಹೇಳಿಕೆಯನ್ನು ಪಡೆದಿಲ್ಲ, ಸ್ವತ್ತಿನ ಪಟ್ಟಿ ಸಲ್ಲಿಸಿಲ್ಲ, ಯಾವುದೇ ಮುದ್ದೆ ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಲ್ಲ, ವರದಿ ಸ್ವೀಕರಿಸಿಲ್ಲ, ಯಾವುದೇ ಅಬಕಾರಿ ಸ್ವತ್ತನ್ನು ಹಸ್ತಾಂತರಿಸಲು ಯಾವುದೇ ಪತ್ರ ಬರೆದಿಲ್ಲ, ಯಾವುದೇ ಅಬಕಾರಿ ಸ್ವತ್ತು ಹಸ್ತಾಂತರಿಸಿಲ್ಲ, ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲದಿದ್ದರೂ ಸಹ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಮುಮಾ-1 ರಿಂದ ಮುಮಾ-3 ಕ್ಕೂ ಮತ್ತು ಆರೋಪಿತಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ